ಯುಗಾದಿ ವಿಶೇಷಾಂಕಕ್ಕೆ ಒಮ್ಮೆ ಅಣಕವಾಡುಗಳನ್ನು ಆಹ್ವಾನಿಸಿದ್ದರು. ಗೋವಿನ ಕತೆಯ ಅಣಕವಾಡನ್ನು ಬರೆದು ಕಳುಹಿಸಿದ್ದೆ. ಅದು ಪ್ರಕಟವಾಯಿತು. ಅಲ್ಲಿಂದ ಮುಂದಕ್ಕೆ ಎಲ್ಲ ರೀತಿಯ ಬರವಣಿಗೆಯನ್ನೂ ಕೈಗೊಂಡೆ. ನನ್ನ ಮಾತಿನಲ್ಲಿ ಸಹಜವಾಗಿ ನುಸುಳುತ್ತಿದ್ದ ಹಾಸ್ಯ ಬರವಣಿಗೆಯಲ್ಲಿ ಕೃತಕ ಎನ್ನಿಸತೊಡಗಿತು. ಆದರೂ ಬರೆಯುತ್ತಲೇ ಇದ್ದೆ. ಕಾವ್ಯ ದಕ್ಕಲಿಲ್ಲ. ಒಂದಷ್ಟು ಕತೆಗಳು ಪತ್ರಿಕೆಗಳಲ್ಲಿ ಬಂದವು, ಆದರೆ 'ಪ್ರಜಾವಾಣಿ' ಕಥಾಸ್ಪರ್ಧೆಯಲ್ಲಿ ಒಂದು ಕತೆಗೆ ತೀರ್ಪುಗಾರರ ಮೆಚ್ಚುಗೆ ಸಿಕ್ಕಾಗ ಆತ್ಮವಿಶ್ವಾಸ ಬಂತು. ಬಹುಶಃ ಅಲ್ಲಿಂದಲೇ ನನ್ನ ಗಂಭೀರ ಕಥಾಯಾತ್ರೆ ಸುರುವಾಯಿತು ಎನ್ನಬಹುದೇನೋ.

ನನ್ನ ಕಥಾಯಾತ್ರೆಯಲ್ಲಿ ನನ್ನನ್ನು ನಿಜಕ್ಕೂ ತಮ್ಮ ಖಡಕ್‌ನುಡಿಯಿಂದ, ವಿಶ್ವ ಸಾಹಿತ್ಯವನ್ನು ಪರಿಚಯಿಸುವುದರ ಮೂಲಕ ನನ್ನ ಪ್ರಜ್ಞೆಯನ್ನು ಮೂಡಿಸಿದ್ದು ಎಸ್. ದಿವಾಕರ್. ನಾನು ವಿದ್ಯೆಗೂ ಕೆಲಸಕ್ಕೂ ಬೇರೆ ಬೇರೆ ಸ್ಥಳಗಳಲ್ಲಿದ್ದವನು. ಮೊದಲಿಗೆ ಗುಜರಾತಿನ ಆಣಂದ. ಪಕ್ಕದಲ್ಲಿಯೋ ವಲ್ಲಭ ವಿದ್ಯಾನಗರದಲ್ಲಿ ವಿಮರ್ಶಕ ಕೀರ್ತಿನಾಥ ಕುರ್ತಕೋಟಿಯವರಿದ್ದರೂ ಅವರ ಭೇಟಿ ಮಾಡುವ ಧೈರ್ಯವಿರಲಿಲ್ಲ. ಅವರ ಗೆಳೆತನ ಸಾಧ್ಯವಿದ್ದರೂ ನನ್ನದೇ ಭೀತಿಗಳಿಂದಾಗಿ ಬಿಟ್ಟುಕೊಟ್ಟೆ. ಆದರೆ ಅಲ್ಲೇ ನೆಲೆಸಿದ್ದ ಸುಂದರ ನಾಡಕರ್ಣಿಯವರ ಸ್ನೇಹವನ್ನು ಗಳಿಸಿದ್ದೆ. ಹೈದರಾಬಾದಿಗೆ ಕೆಲಸಕ್ಕೆಂದು ಬಂದಾಗ ನನಗೆ ಸಿಕ್ಕ ಹೈದರಾಬಾದ್ ಸಾಹಿತ್ಯ ಮಂದಿರದ ಗೆಳೆಯರಾದ ಪವನ್ ಮಾನ್ವಿ, ಪ್ರಹ್ಲಾದ ಜೋಷಿ, ಗೋನವಾರಕಿಶನ್ ರಾವ್, ಅರವಿಂದ ಸಂಗಮ್, ಹಿಂದಿಯಲ್ಲಿ ಹಾಸ್ಯ ಸಾಹಿತ್ಯ ಬರೆಯುತ್ತಿದ್ದ ಉಪೇಂದ್ರ ಇವರೆಲ್ಲರೂ ನನ್ನ ಓದನ್ನೂ, ಬರವಣಿಗೆಯ ಕ್ರಮವನ್ನೂ ತಮ್ಮ ಚರ್ಚೆಯ ಮೂಲಕ ರೂಪಿಸಿದರು. ಆಗಿನ ದಿನಗಳಲ್ಲಿ ಒಂದು ಕತೆಯನ್ನು ಬರೆದರೆ, ಅದನ್ನು ಒಂದು ಸಂಜೆ ಕೂತು ಗೆಳೆಯರ ನಡುವೆ ಓದುವ ಪ್ರಕ್ರಿಯೆಯಿತ್ತು. ಅದಕ್ಕೆ ನಮಗೆ ಅಡ್ಡಾ– ಸಾಹಿತ್ಯ ಮಂದಿರ ಅಥವಾ ಬಿ.ಟಿ. ದೇಸಾಯಿ ಮಾಸ್ತರ ಮನೆ. ದ್ರೋಣಾಚಾರ್ಯರಂತೆ ಕಲಿಸದೆಯೇ ಕಲಿಸಿದ ಗುರು ಕೆ.ವಿ. ತಿರುಮಲೇಶ. ಹೀಗೆ ಹೈದರಾಬಾದಿನ 'ಎಂದರೋ ಮಹಾನುಭಾವುಲು' ನನ್ನ ಕಥನ ಕಲೆಯನ್ನು ರೂಪಿಸಿದರು. ಹೀಗಾಗಿಯೇ ನಾನಿಂದು ಕತೆಗಾರನಾಗಿ ಉಳಿದಿದ್ದರೆ ಅದು ನನ್ನ ಸಹಜವಾಗಿ ಒಗ್ಗಿಬಂದ ಕಥನತಂತ್ರದಿಂದಾಗಿ ಅಲ್ಲ. ಅದನ್ನು ರೂಪಿಸಿದ ಪರಿಸರದಿಂದಾಗಿ ನಾನು ಕತೆಗಾರನಾಗಿ ಉಳಿಯಲು ಸಾಧ್ಯವಾಗಿದೆ.

ನನಗೆ ಕತೆ ಬರೆಯುವುದು ಸಹಜವಾದದ್ದೇನೂ ಅಲ್ಲ. ಇದು ಹೆಚ್ಚಿನಂಶ ಓದಿನಿಂದ ಪ್ರೇರಿತವಾಗುವ ಪ್ರಕ್ರಿಯೆ. ಓದೆಂದರೆ ಬರೇ ಕಥನಸಾಹಿತ್ಯದ ಓದಲ್ಲ– ಬದಲಿಗೆ ಯಾವುದೇ ಓದು – ಪತ್ರಿಕೆ, ತಾಂತ್ರಿಕ ಲೇಖನ, ಏನೇ ಆಗಿರಬಹುದು. ಅದು ನನ್ನನ್ನು ಚಿಂತನೆಗೆ ಹಚ್ಚುತ್ತದೆ. ಅದಕ್ಕೆ ಪ್ರತಿಕ್ರಿಯಿಸಬೇಕು ಎಂದು ಅನ್ನಿಸಿದಾಗ ಹಾಗೂ ತಾಂತ್ರಿಕವಾಗಿ–ತಾರ್ಕಿಕವಾಗಿ ಪ್ರತಿಕ್ರಿಯಿಸುವುದು ಸಾಧ್ಯವಾಗದಿದ್ದಾಗ ಸೃಜನಾತ್ಮಕವಾಗಿ ಕತೆಯ ರೂಪದಲ್ಲಿ ಪ್ರತಿಕ್ರಿಯಿಸುವುದಕ್ಕೆ ಸಾಧ್ಯವಾಗುತ್ತದೆ. ಕೆಲವೊಮ್ಮೆ ಕತೆ ಬರೆಯುವುದು ಇತರರ ಕಥನ ತಂತ್ರಕ್ಕೆ ಪ್ರತಿಕ್ರಿಯೆಯಾಗಿ ಅಥವಾ ಮೆಚ್ಚುಗೆಯಿಂದ ಅದನ್ನು ಕೈಗೂಡಿಸಿಕೊಳ್ಳುವುದಕ್ಕೂ ಇರಬಹುದು. ಇದಕ್ಕಾಗಿ ನಾನು ಅನೇಕ ಅನುವಾದಗಳನ್ನು ಕೈಗೊಂಡಿದ್ದೇನೆ. ಒಮ್ಮೊಮ್ಮೆ ಕಂಡ ಘಟನೆಗಳಿಗೆ– ಆದ ಅನುಭವಕ್ಕೆ ಒಂದು ಚೌಕಟ್ಟನ್ನು ನೀಡುವುದಕ್ಕೂ ಆಗಬಹುದು. ಹೀಗೆ ಕತೆ ಬರೆಯುವುದಕ್ಕೆ ಹಲವು ಕಾರಣಗಳಿವೆ. ಆದರೆ ಬರೆಯುವಾಗ ನಾನು ಪ್ರಜ್ಞಾಪೂರ್ವಕವಾಗಿ